# ರಾಜಧಾನಿಯಲ್ಲಿ ಶವ ಸಂಸ್ಕಾರವೇ ಸವಾಲು!

## ಸೋಂಕಿನಿಂದಾಗಿ ಸಾವಿನ ಪ್ರಮಾಣ ಹೆಚ್ಚಳ ಹಿನ್ನೆಲೆ | ಚಿತಾಗಾರಗಳ ಮುಂದೆ ಮೃತಪಟ್ಟವರ ಶವ ಹೊತ್ತು ನಿಂತ ಆ್ಯಂಬುಲೆನ್ಸ್‌ಗಳು

15/4/21

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಕೋವಿಡ್ ವ್ಯಕ್ತಿಗಳ ಸಾವಿನ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಶವಗಳ ಅಂತ್ಯಕ್ರಿಯೆಗಾಗಿ ಶವ ಹೊತ್ತು ತಂದ ಆ್ಯಂಬುಲೆನ್ಸ್‌ಗಳು ವಿದ್ಯುತ್ ಚಿತಾಗಾರಗಳ ಮುಂದೆ ಗಂಟೆಗಟ್ಟಲೆ ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬುಧವಾರ ರಾಜರಾಜೇಶ್ವರಿ ನಗರ ವಲಯದ ಸುಮ್ಮನಹಳ್ಳಿ ವಿದ್ಯುತ್ ಚಿತಾಗಾರ ಮತ್ತು ಯಲಹಂಕ ವಲಯದ ಮೇದಿ ಅಗ್ರಹಾರ ವಿದ್ಯುತ್ ಚಿತಾಗಾರದ ಮುಂದೆ ಶವಗಳನ್ನು ಹೊತ್ತು ಸಾಲುಗಟ್ಟಿ ನಿಂತ ಆ್ಯಂಬುಲೆನ್ಸ್ ದೃಶ್ಯಗಳು ಕಂಡು ಬಂದಿತು.

ಸುಮನಹಳ್ಳಿ ವಿದ್ಯುತ್ ಚಿತಾಗಾರಕ್ಕೆ ಮಂಗಳವಾರ ಕೋವಿಡ್‌ನಿಂದ ಮೃತಪಟ್ಟ 20 ಶವಗಳನ್ನು ತರಲಾಗಿತ್ತು. ಬುಧವಾರ ನಾಲ್ಕು ಶವಗಳು ಬಂದಿದ್ದವು. ಪ್ರತಿ ಶವದ ಅಂತ್ಯಕ್ರಿಯೆಗೆ ಮುಕ್ಕಾಲು ಗಂಟೆ ಬೇಕಾಗುತ್ತದೆ. ಕೆಲವೊಮ್ಮೆ ಶವ ಸಂಸ್ಕಾರಕ್ಕೂ ಮುನ್ನ ಧಾರ್ಮಿಕ ವಿಧಿವಿಧಾನಗಳನ್ನು ಮಾಡಿ ಮುಗಿಸಲು ತಡವಾಗುವುದರಿಂದ ಶವ ಅಂತ್ಯಕ್ರಿಯೆ ನಿಗದಿತ ಅವಧಿಯಲ್ಲಿ ಮುಗಿಸಲು ಸಾಧ್ಯವಾಗುವುದಿಲ್ಲ. ಹೀಗಾಗಿ ಶವಗಳನ್ನು ಸಂಬಂಧಿಕರು ಆ್ಯಂಬುಲೆನ್ಸ್‌ನಲ್ಲಿ ತಂದು ವಿದ್ಯುತ್ ಚಿತಾಗಾರದ ಮುಂದೆ ನಿಲ್ಲಿಸಿದ್ದಾರೆ ಎಂದು ವಿದ್ಯುತ್ ಚಿತಾಗಾರದ ನಿರ್ವಹಣೆ ಮಾಡುವ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಮೇಶ್ ಮಾಹಿತಿ ನೀಡಿದರು.

ಯಲಹಂಕ ವಿದ್ಯುತ್ ಚಿತಾಗಾರಕ್ಕೆ ಬುಧವಾರ 15 ಶವಗಳು ಬಂದಿದ್ದು, ಮಧ್ಯಾಹ್ನದವರೆಗೆ 8 ಶವಗಳಿಗೆ ಸಂಸ್ಕಾರ ಮಾಡಲಾಗಿತ್ತು. ಉಳಿದಂತೆ 7 ಶವಗಳು ಆ್ಯಂಬುಲೆನ್ಸ್‌ನಲ್ಲೇ ಕಾಯಬೇಕಾಯಿತು. ಉಳಿದಂತೆ ಯಾವುದೇ ಸಮಸ್ಯೆ ಇಲ್ಲ ಎಂದು ಯಲಹಂಕ ವಿದ್ಯುತ್ ಚಿತಾಗಾರದ ನಿರ್ವಹಣೆ ಮಾಡುತ್ತಿರುವ ಎಂಜಿನಿಯರ್ ರಾಜೇಂದ್ರನಾಯ್ಕ್ ಮಾಹಿತಿ ನೀಡಿದರು.

**ಶವ ಸುಡಲು ಗಂಟೆ ಬೇಕು:** ಒಂದು ಶವ ಸಂಸ್ಕಾರಕ್ಕೆ ಕನಿಷ್ಠ ಮುಕ್ಕಾಲು ಗಂಟೆ ಬೇಕಾಗುತ್ತದೆ. ಕೆಲವೊಂದು ಶವಗಳು ಭಸ್ಮವಾಗಲು ಒಂದು ಗಂಟೆ ಬೇಕಾಗುತ್ತದೆ. ಕೆಲವರು ರಾಹುಕಾಲ ನೋಡಿಕೊಂಡು ಅಂತಿಮ ವಿಧಿಗಳನ್ನು ಪೂರೈಸಲು ಅದಕ್ಕಿಂತ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ನಿಗದಿಪಡಿಸಿದಷ್ಟು ದೇಹಗಳ ಅಂತ್ಯಕ್ರಿಯೆ ನಡೆಸಲು ಸಾಧ್ಯವಾಗುವುದಿಲ್ಲ. ಒಂದು ದೇಹದ ಅಂತ್ಯಕ್ರಿಯೆ ನಡೆಯುತ್ತಿರುವಂತೆಯೇ ಮತ್ತೊಂದು ಮೃತದೇಹದ ಅಂತಿಮ ವಿಧಿಗಳನ್ನು ಪೂರೈಸಿದರೆ ಸಮಸ್ಯೆ ಬಗೆಹರಿಯುತ್ತದೆ. ನಿತ್ಯ ಬೆಳಗ್ಗೆ 7 ಗಂಟೆಗೆ ಚಿತಾಗಾರ ತೆರೆಯಾಗುತ್ತದೆ. ಸಂಜೆ 6 ಗಂಟೆಗೆ ಮುಕ್ತಾಯಗೊಳ್ಳಲಿದೆ. ಈ ಅವಧಿಯಲ್ಲಿ ಶವಗಳ ಅಂತ್ಯಕ್ರಿಯೆ ನಡೆಸಲಾಗುತ್ತದೆ ಎಂದು ರಾಜೇಂದ್ರನಾಯ್ಕ್ ತಿಳಿಸಿದರು.



ಯಲಹಂಕ ವಲಯದ ಮೆಡಿ ಅಗ್ರಹಾರದ ವಿದ್ಯುತ್ ಚಿತಾಗಾರದ ಮುಂದೆ ಅಂತ್ಯಕ್ರಿಯೆಗಾಗಿ ಶವ ಹೊತ್ತು ಕಾಯುತ್ತಿರುವ ಸಂಬಂಧಿಕರು.

### 5 ಚಿತಾಗಾರ ಮೀಸಲು

ಬಿಬಿಎಂಪಿಯಲ್ಲಿ ಒಟ್ಟು 12 ವಿದ್ಯುತ್ ಚಿತಾಗಾರಗಳಿದ್ದು, ನಗರದಲ್ಲಿ ಪ್ರತಿನಿತ್ಯ ಕೋವಿಡ್ ಹಾಗೂ ನಾನ್ ಕೋವಿಡ್ ಸೇರಿ 160 ಮೃತದೇಹಗಳನ್ನು ದಹನ ಮಾಡಬಹುದಾಗಿದೆ. ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕೆಂಗೇರಿ, ಬೊಮ್ಮನಹಳ್ಳಿಯ ಸಿಂಗಸಂದ್ರ, ಸುಮನಹಳ್ಳಿ, ಮೇದಿ ಅಗ್ರಹಾರ ಮತ್ತು ಪನ್ನತ್ತೂರು ವಿದ್ಯುತ್ ಚಿತಾಗಾರಗಳನ್ನು ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಗಾಗಿ ಮೀಸಲು ಇಡಲಾಗಿದೆ.

## ಒಂದೇ ದಿನ 8,000+ ಕೇಸ್: ಮತ್ತೆ ಸಾರ್ವಕಾಲಿಕ ದಾಖಲೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಕೊರೋನಾ ಬುಧವಾರ 8,155 ಹೊಸ ಪ್ರಕರಣಗಳು ದೃಢಪಟ್ಟಿದ್ದು 23 ಮಂದಿ ಸೋಂಕಿನಿಂದ ಸಾವನ್ನಪ್ಪಿದ್ದಾರೆ.



ಬುಧವಾರ ದಾಖಲಾದ ಪ್ರಕರಣಗಳೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 63,167ಕ್ಕೆ ಏರಿಕೆಯಾಗಿದ್ದು, ಒಟ್ಟು ಸೋಂಕಿತರ ಸಂಖ್ಯೆ 5,02,024ಕ್ಕೆ ಹೆಚ್ಚಳವಾಗಿದೆ. 2,540 ಮಂದಿ ಬಿಡುಗಡೆಯಾಗಿದ್ದು, ಈವರೆಗೆ ಸೋಂಕಿನಿಂದ 4,33,923 ಮಂದಿ ಗುಣಮುಖರಾಗಿದ್ದಾರೆ. ತೀವ್ರ ನಿಗಾ ಘಟಕದಲ್ಲಿ 184 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ. 40 ಮಂದಿ ಮೃತಪಡುವುದರೊಂದಿಗೆ ಒಟ್ಟು ಮರಣ ಹೊಂದಿದವರ ಸಂಖ್ಯೆ 4,933ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಇಲಾಖೆ ವರದಿ ತಿಳಿಸಿದೆ.

### 14 ದಿನದಲ್ಲಿ 67,000 ಸೋಂಕು; 314 ಜನರ ಸಾವು

ನಗರದಲ್ಲಿ ಕೇವಲ 14 ದಿನಗಳಲ್ಲಿ ಬರೋಬ್ಬರಿ 67,197 ಜನರಲ್ಲಿ ಸೋಂಕು ಪತ್ತೆಯಾಗಿದೆ. ಇದೇ ಅವಧಿಯಲ್ಲಿ 314 ಮಂದಿ ಮೃತಪಟ್ಟಿದ್ದಾರೆ.

ಕಳೆದ ಮಾರ್ಚ್ ತಿಂಗಳಲ್ಲಿ ನಗರದಲ್ಲಿ 27,575 ಮಂದಿಯಲ್ಲಿ ಸೋಂಕು ಪತ್ತೆಯಾಗಿ, 133 ಮಂದಿ ಸೋಂಕಿತರು ಮೃತಪಟ್ಟಿದ್ದರು. ಆದರೆ, ಏಪ್ರಿಲ್ ಆರಂಭದಲ್ಲಿ ಕೋವಿಡ್ ಎರಡನೇ ಅಲೆ ಆರಂಭಗೊಂಡ ನಂತರ ನಿತ್ಯ ಸೋಂಕಿತ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಲೇ ಸಾಗಿದೆ. ಪ್ರಾರಂಭದಲ್ಲಿ ಎರಡ್ಮೂರು ಸಾವಿರ ಸೋಂಕಿತ ಪ್ರಕರಣಗಳು ಪತ್ತೆಯಾಗುತ್ತಿದ್ದರೆ, ನಂತರ ಸೋಂಕಿತರ ಸಂಖ್ಯೆ 7 ಸಾವಿರದ ಗಡಿದಾಟಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ವಾರದೊಳಗೆ ಸೋಂಕಿತ ಪ್ರಕರಣಗಳ ಸಂಖ್ಯೆ 10 ಸಾವಿರಕ್ಕೂ ಹೆಚ್ಚು ಬರುವ ಸಾಧ್ಯತೆ ಇದೆ ಎಂದು ಆರೋಗ್ಯ ಇಲಾಖೆ ಮೂಲಗಳು ಮಾಹಿತಿ ನೀಡಿವೆ.